
ಅಪಾಯದ ಅವಲೋಕನದಲ್ಲಿ ಟಿಟ್ಟಿಭ


ಮೊಟ್ಟೆಗೆ ಕಾವಲು

ಅಣಿಯಾದೆ. ಎಷ್ಟು ಹೊತ್ತಾದರೂ ಟಿಟ್ಟಿಭ ದರುಶನ ದಯಪಾಲಿಸಲಿಲ್ಲ.

ಬಹಳ ಹೊತ್ತಿನ ನಂತರ ಅದು ದೂರದಲ್ಲಿ ನಡೆದಾಡಿಕೊಂಡು ಬರುವುದು ಕಾಣಿಸಿತು. ಕ್ಷಣಾರ್ಧದಲ್ಲಿ ಅದೃಶ್ಯವಾಗುವುದು, ಮೊಟ್ಟೆಯ ಕಡೆಗೆ ಅಡ್ಡಾದಿಡ್ಡಿ ಸರಸರನೆ ಬರುವುದು, ಮರೆಯಾಗುವುದು ಮಾಡತೊಡಗಿತು. ಆಗೊಮ್ಮೆ ಈಗೊಮ್ಮೆ ದೂರದಲ್ಲಿದ್ದು ಗಮನಿಸುತ್ತಿದ್ದ ಸಂಗಾತಿಯು 'ಟ್ರೀಕ್ ಟ್ರೀಕ್' ಎಂದು ಎಚ್ಚರಿಕೆಯ ಸಂಕೇತ ನೀಡುತ್ತಾ ಕಾವು ಕೊಡಲು ಬರುವ ಹೆಣ್ಣಿಗೆ ಧೈರ್ಯ ತುಂಬುತ್ತಿತ್ತು. ಇತರೆ ಪ್ರಾಣಿ–ಪಕ್ಷಿಗಳು ಮೊಟ್ಟೆಯ ಇರುವನ್ನು ಪತ್ತೆ ಮಾಡಬಾರದೆಂದು ನೇರವಾಗಿ ಬಾರದೆ, ಅಡ್ಡಾದಿಡ್ಡಿ ಬರುವ ಅಭ್ಯಾಸವಿಟ್ಟುಕೊಂಡಿರುವ ಜಾಣ ಪಕ್ಷಿಗಳಿವು!

ಕೊನೆಗೂ, ಮೊಟ್ಟೆ ಮೇಲೆ ಕುಳಿತ ಟಿಟ್ಟಿಭದ ಹಾವ ಭಾವಗಳ ಒಂದಷ್ಟು ಫೋಟೊಗಳನ್ನು ಕ್ಲಿಕ್ಕಿಸಿದೆ. ಬಿಸಿಲ ಧಗೆಗೆ ಆಕೆಯ ಕೊಕ್ಕಿನಿಂದ ನೀರು ಹನಿ ಹನಿಯಾಗಿ ಜಿನುಗುತ್ತಿತ್ತು. ತುಸು ಹೊತ್ತಿನಲ್ಲಿ ಆಗಮಿಸಿದ ಗಂಡು, ಹೆಣ್ಣು ಬಸವಳಿದಿರುವುದನ್ನು ಗಮನಿಸಿ ಆಕೆಯನ್ನು ಹೋಗುವಂತೆ ಕಣ್ಸನ್ನೆಯಲ್ಲೇ ಹೇಳಿ ತಾನು ಕಾವು ಕೊಡಲು ಶುರುಮಾಡಿತು.

ಬಿಸಿಲಿನ ತಾಪ ಹೆಚ್ಚಾದಂತೆ ನೀರಿನ ತಾಣ ಅರಸಿ, ದೇಹವನ್ನು ನೀರಿನಲ್ಲಿ ತೋಯ್ದುಕೊಂಡು ಮೊಟ್ಟೆಗಳ ಮೇಲೆ ಕುಳಿತು, ಮೊಟ್ಟೆಗೆ ಅಗತ್ಯವಿರುವ ತೇವಾಂಶ ಮತ್ತು ಶಾಖ ಕೊಡುತ್ತವೆ ಈ ಹಕ್ಕಿಗಳು!

ಪಕ್ಷಿಗಳನ್ನು ದೂರದಲ್ಲಿ ನಿಂತು ಗಮನಿಸುತ್ತಿದ್ದ ನಾಯಿ ಟಿಟ್ಟಿಭದ ಕಡೆ ಬರತೊಡಗಿತು. ತಕ್ಷಣ ಎದ್ದು ನಿಂತ ಟಿಟ್ಟಿಭ, ಅಡ್ಡಾದಿಡ್ಡಿ ಓಡಾಡುವುದು, ನೆಲದ ಮೇಲೆ ಕುಳಿತುಕೊಳ್ಳುವುದು, ಮುಂದೆ ಮುಂದೆ ಹೋಗುವುದು ಮಾಡತೊಡಗಿತು. ಟಿಟ್ಟಿಭ ಮುಂದೆ ಹೋದಂತೆಲ್ಲಾ ನಾಯಿ ಹಿಂಬಾಲಿಸಿತು; ಮೊಟ್ಟೆಯನ್ನು ಮರೆತೇಬಿಟ್ಟಿತು! ಅಷ್ಟೇ. ಇದ್ದಕ್ಕಿದ್ದಂತೆ ಜೋಡಿ ಟಿಟ್ಟಿಭಗಳು ಕರ್ಕಶವಾಗಿ ಚೀರಾಡುತ್ತಾ ನಾಯಿ ಮೇಲೆರಗಿದವು. ನಾಯಿ ಓಟ ಕಿತ್ತಿತು. ನನಗೆ ಆಶ್ಚರ್ಯವೂ, ಮನರಂಜನೆಯೂ ಸಿಕ್ಕಿತು.

ಮೊಟ್ಟೆ ಬಿರಿದು ಹೊರ ಪ್ರಪಂಚಕ್ಕೆ ಕಾಲಿರಿಸುವ ಮರಿಗಳು ಒಂದರ್ಧ ದಿನ ಅಮ್ಮನ ರೆಕ್ಕೆಗಳಲ್ಲಿ ಆಶ್ರಯ ಪಡೆದು, ತುಸು ಸಮಯದಲ್ಲೇ ಕೋಳಿ ಮರಿಗಳಂತೆ ನೆಲ ಕುಕ್ಕಲು ಶುರುಮಾಡುತ್ತವೆ. ಆಕ್ರಮಣದ ಸೂಚನೆ ಬಂದಲ್ಲಿ, ಅಪ್ಪ–ಅಮ್ಮ ಕಿರಿಚಾಡುತ್ತಾ ಓಡಾಡುತ್ತಾ ಮರಿಗಳಿಗೆ ಅಪಾಯದ ಸೂಚನೆ ನೀಡುತ್ತವೆ. ಮರಿಗಳು ತಕ್ಷಣ ಹತ್ತಿಯ ಉಂಡೆಯಂತಾಗಿ ಕಲ್ಲು, ಕುರುಚಲು ಗಿಡಗಳ ಸಂದಿಯಲ್ಲಿ ಸೇರಿದವೆಂದಾದಲ್ಲಿ, ಆ ಬ್ರಹ್ಮನಿಗೂ ಅವುಗಳನ್ನು ಕಂಡುಹಿಡಿಯುವುದು ಅಸಾಧ್ಯ!

ಸುಮಾರು ಮೂರು ವಾರಗಳ ಕಾಲ ನಾನು ಮತ್ತು ಟಿಟ್ಟಿಭಗಳು ವಾರಕ್ಕೊಮ್ಮೆ ಭೇಟಿಯಾಗುತ್ತಿದ್ದೆವು. ಈ ಸಂಗಾತಿಗಳು ಒಂದರ ಹಿಂದೊಂದು ವಯ್ಯಾರದಿಂದ ಓಡಾಡುತ್ತಾ, ಪಿಸುಮಾತನ್ನಾಡುತ್ತಾ, ಮಗದೊಮ್ಮೆ ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತಾ ಮುದ್ದು ಮರಿಗಳೊಂದಿಗಿನ ಸುಖ ಸಂಸಾರದ ಕನಸನ್ನು ಹೆಣೆಯುತ್ತಿದ್ದವು.

ಮೊಟ್ಟೆ ಒಡೆದು ಪುಟ್ಟ ಮರಿಗಳು ಹೊರ ಪ್ರಪಂಚಕ್ಕೆ ಕಾಲಿಡುವುದು ಪ್ರಕೃತಿಯಲ್ಲಿ ನಡೆಯುವ ಒಂದು ಅನೂಹ್ಯ ಪ್ರಕ್ರಿಯೆ. ನಾನು, ಆ ಟಿಟ್ಟಿಭ ಹಕ್ಕಿಗಳ ಮೊಟ್ಟೆ ಒಡೆಯುವ ದಿನವನ್ನು ಊಹಿಸಿ ಕ್ಯಾಲೆಂಡರಿನಲ್ಲಿ ಗುರುತು ಹಾಕಿಟ್ಟುಕೊಂಡಿದ್ದೆ. ಆ ದಿನ ಬಂದೇ ಬಿಟ್ಟಿತು! ಟಿಟ್ಟಿಭ ಸಂಸಾರದಲ್ಲಿ ಪುಟ್ಟ ಕಂದಮ್ಮಗಳ ಆಗಮನ, ಅವುಗಳ ಓಡಾಟದ ಸಂಭ್ರಮವನ್ನು ನಾನೂ ಕಣ್ತುಂಬಿಕೊಳ್ಳಬೇಕೆಂದು ಕಾತರದಿಂದ ಅದೇ ಜಾಗಕ್ಕೆ ಹೋದೆ.

ಸುತ್ತಲಿನ ಪರಿಸರ ಎಂದಿನಂತಿರಲಿಲ್ಲ. ಅಕ್ಕಪಕ್ಕದ ಪೊದೆಯೊಳಗೆ, ದಿಬ್ಬಗಳ ಮೇಲೆ ಹಾರುತ್ತಾ ಕುಪ್ಪಳಿಸುತ್ತಿದ್ದ ಬೇಲಿ ಚಟಕ (Bush Chat), ನೆಲ ಗುಬ್ಬಿ (Sparrow Lark), ಮಡಿವಾಳ ಹಕ್ಕಿ (Oriental Magpie Robin), ಕಳ್ಳಿ ಪೀರ (Bee Eater) ಪಕ್ಷಿಗಳೆಲ್ಲವೂ ಮರೆಯಾಗಿದ್ದವು. ಒಂದು ರೀತಿಯ ವಿಲಕ್ಷಣತೆಯ ಛಾಯೆ.

ನಾನು ಓಡೋಡಿ ಬಂದು ಗೂಡಿನ ಪಕ್ಕ ನಿಂತು ಪರೀಕ್ಷಿಸಿದೆ, ಗೂಡಿನಲ್ಲಿ ಮೊಟ್ಟೆಗಳಿಲ್ಲ! ಬದಲಿಗೆ ಚದುರಿ ಬಿದ್ದಿದ್ದ ಒಂದೆರಡು ಬಿದಿರಿನ ಕಡ್ಡಿಗಳು, ಸಿಕ್ಕುಗಟ್ಟಿರುವ ಕಪ್ಪು ಬಣ್ಣದ ದಾರಗಳು ಕಂಡವು. ಆಗೊಮ್ಮೆ ಈಗೊಮ್ಮೆ ಬೀಸುತ್ತಿದ್ದ ಬಿಸಿ ಗಾಳಿಗೆ ಟಿಟ್ಟಿಭದ ಒಂದೆರಡು ಗರಿಗಳು ತೇಲುತ್ತಾ ತೆವಳುತ್ತಾ ದೂರ ದೂರಕ್ಕೆ ಸಾಗಿ ಮರೆಯಾಗುತ್ತಿದ್ದವು. ಆತ್ಮೀಯ ಸ್ನೇಹಿತನನ್ನು ಕಳೆದುಕೊಂಡಂತೆ ದುಃಖ ಉಮ್ಮಳಿಸಿತು.

ಮಾನವನ ಬಿಗಿಮುಷ್ಟಿಯಲ್ಲಿ ಒದ್ದಾಡಿ ಪ್ರಾಣ ಬಿಟ್ಟ ಸಂಗಾತಿಯ ಮರಣ ವೇದನೆ ಕಂಡ ಒಂಟಿ ಟಿಟ್ಟಿಭವೊಂದರ 'ಟಿಟ್ವೀರಿ ಟ್ವೀರಿ' ಆರ್ತನಾದ ದೂರದಲ್ಲಿ ಕೇಳಿಸಿದಂತಾಯ್ತು. ಮನುಷ್ಯ ನಾಲಿಗೆ ಚಪಲಕ್ಕಾಗಿ ಪಕ್ಷಿಗಳ ಮೊಟ್ಟೆಗಳನ್ನು ಒಯ್ಯುವುದು, ಕಾವು ನೀಡಲು ಬರುವ ಹಕ್ಕಿಗಳನ್ನು ಬಲೆ ಹೆಣೆದು ಸೆರೆಹಿಡಿದು ತಿಂದು ತೇಗುವುದು ಮಾಡುತ್ತಲೇ ಇದ್ದಾನೆ. ಇದರೊಂದಿಗೆ, ಕೆರೆಕಟ್ಟೆ, ಹೊಲ ಗದ್ದೆಗಳನ್ನೆಲ್ಲ ನುಂಗಿ ಶರವೇಗದಲ್ಲಿ ನಡೆಯುತ್ತಿರುವ ನಗರೀಕರಣ, ಕೀಟನಾಶಕದ ಬಳಕೆ ಇತರೆ ಪಕ್ಷಿ ಪ್ರಭೇದದೊಂದಿಗೆ ಟಿಟ್ಟಿಭದ ಸಂತತಿಯನ್ನೂ ವಿನಾಶದಂಚಿಗೆ ತಳ್ಳಿವೆ.

ಪ್ರಾಣಿ–ಪಕ್ಷಿಗಳಿಗೆ ಆಹಾರವಾಗದೆ ಉಳಿದು ಮರಿಯಾಗುವ ಮೊಟ್ಟೆಯ ಪ್ರಮಾಣ ಶೇ. 40ರಿಂದ 60. ಈ ಎಲ್ಲಾ ಸಂಘರ್ಷದ ನಡುವೆ ತಂದೆ–ತಾಯಿಯ ರಕ್ಷಣೆಯಲ್ಲಿ ಬೆಳೆಯುವ ಟಿಟ್ಟಿಭ ಮರಿಗಳ ಸಂಖ್ಯೆ ಕೇವಲ ಶೇ.30 ಮಾತ್ರ.

ಪ್ರತಿಕ್ರಿಯಿಸಿ: feedback@sudha.co.in